**All India Radio: Bangalore**
**National Bulletins In Kannada**
**27.07.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**27.07.2025 / 7.35 am**

**<><*<><>*><>**

ಮುಖ್ಯಾಂಶಗಳು

**೧. ತಮಿಳುನಾಡಿನಲ್ಲಿ ೪ ಸಾವಿರದ ೮೦೦ ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ**

**೨. ಮನ್ ಕಿ ಬಾತ್‌ನ ೧೨೪ನೇ ಆವೃತ್ತಿಯಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮನದಾಳದ ಮಾತು**

**೩. ವಿದ್ಯಾರ್ಥಿಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ತುರ್ತು ಕ್ರಮ ಕೈಗೊಳ್ಳುವಂತೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಶಿಕ್ಷಣ ಸಚಿವಾಲಯ ನಿರ್ದೇಶನ**

**೪. ಎನ್‌ಸಿಇಆರ್‌ಟಿಯ ಹೊಸ ಪಠ್ಯಕ್ರಮದಲ್ಲಿ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಆಪ್‌ರೇಶನ್ ಸಿಂದೂರ ವಿಷಯಗಳ ಸೇರ್ಪಡೆಗೆ ಚಿಂತನೆ**

**೫. ಫಿಡೆ ಮಹಿಳಾ ಚೆಸ್ ವಿಶ್ವಕಪ್; ಕೊನೆರು ಹಂಪಿ- ದಿವ್ಯಾ ದೇಶ್‌ಮುಖ್ ನಡುವಿನ ಫೈನಲ್‌ನ ಮೊದಲ ಸುತ್ತಿನ ಪಂದ್ಯ ಡ್ರಾನಲ್ಲಿ ಅಂತ್ಯ**

**<><*<><>*><>**

ಬ್ರಿಟನ್ ಮತ್ತು ಮಾಲ್ಡೀವ್ಸ್ ಪ್ರವಾಸವನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿ ನಿನ್ನೆ ಸಂಜೆ ತಮಿಳುನಾಡಿಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ೪ ಸಾವಿರದ ೮೦೦ ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿ, ಕೆಲವು ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಈ ಯೋಜನೆಗಳು ಇಂಧನ, ಸಾರಿಗೆ ಮತ್ತು ಲಾಜಿಸ್ಟಿಕ್ಸ್ ಸೇರಿದಂತೆ ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿವೆ. ಪ್ರಧಾನಿ, ೪೫೨ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಟುಟಿಕೋರಿನ್ ವಿಮಾನ ನಿಲ್ದಾಣದಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಲಾದ ಟರ್ಮಿನಲ್ ಕಟ್ಟಡವನ್ನು ಉದ್ಘಾಟಿಸಿದರು. ಟುಟಿಕೋರಿನ್‌ನಲ್ಲಿ ೫೫೦ ಕೋಟಿ ರೂಪಾಯಿ ಮೌಲ್ಯದ ಮೂಲಸೌಕರ್ಯ ಯೋಜನೆಗಳು, ಕೂಡಂಕುಳಂ ಪರಮಾಣು ವಿದ್ಯುತ್ ಸ್ಥಾವರಕ್ಕೆ ಸಂಬಂಧಿಸಿದ ವಿದ್ಯುತ್ ಪ್ರಸರಣ ಕಾರ್ಯಗಳು, ಮಧುರೈ-ಬೋಡಿನಾಯಕನೂರ್ ರೈಲು ಮಾರ್ಗದ ವಿದ್ಯುದೀಕರಣ, ಕೂಡಂಕುಳಂ ಘಟಕ ೩ ಮತ್ತು ೪ ಕ್ಕೆ ವಿದ್ಯುತ್ ವಿತರಣಾ ವ್ಯವಸ್ಥೆಗಳು, ಅರಲ್ವೈಮೊಝಿ ಮತ್ತು ನಾಗರ್‌ಕೋಯಿಲ್ ನಡುವಿನ ರೈಲು

ಮಾರ್ಗದ ಡಬ್ಲಿಂಗ್ ಕಾರ್ಯ, ೨೮೩ ಕೋಟಿ ರೂಪಾಯಿ ನೆಲ್ಲೈ-ಮೇಲಪಾಳಯಂ ರೈಲ್ವೆ ವಿಭಾಗದ ಡಬ್ಲಿಂಗ್, ಸೇಥಿಯಾಥೊಪ್ಪು-ಚೋಳಪುರಂ ವಿಭಾಗದಲ್ಲಿ ಚತುಷ್ಪಥ ರಸ್ತೆ ಅಭಿವೃದ್ಧಿ ಯೋಜನೆ, ಟುಟಿಕೋರಿನ್‌ನ ವಿ.ಒ.ಚಿದಂಬರನಾರ್ ಬಂದರಿನಲ್ಲಿ ೨೮೫ ಕೋಟಿ ರೂಪಾಯಿ ವೆಚ್ಚದ ಸರಕು ಸಾಗಣೆ ಟರ್ಮಿನಲ್ ಉದ್ಘಾಟನೆ, ನಾಗರ್‌ಕೋಯಿಲ್ ನಗರ-ಜಂಕ್ಷನ್-ಕನ್ಯಾಕುಮಾರಿ ರೈಲ್ವೆ ಮಾರ್ಗದ ಡಬ್ಲಿಂಗ್ ಸೇರಿದಂತೆ ೧ ಸಾವಿರದ ೩೦ ಕೋಟಿ ರೂಪಾಯಿ ಮೌಲ್ಯದ ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಲಾಯಿತು.

<><*<><>*><>

ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ತಮಿಳುನಾಡಿನಲ್ಲಿ ರಾಜೇಂದ್ರ ಚೋಳರ ಜಯಂತ್ಯೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ, ಇಂದು ತಮಿಳುನಾಡಿನ ಗಂಗೈಕೊಂಡ ಚೋಳಪುರಂ ದೇವಾಲಯದಲ್ಲಿ ಚೋಳ ವಂಶದ ಶ್ರೇಷ್ಠ ದೊರೆ ರಾಜೇಂದ್ರ ಚೋಳರ ಜನ್ಮದಿನಾಚರಣೆ ಮತ್ತು ಆದಿ ತಿರುವಾತಿರೈ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಚೋಳ ರಾಜ ರಾಜೇಂದ್ರ ಚೋಳನ ಸ್ಮರಣಾರ್ಥ ಒಂದು ನಾಣ್ಯ ಬಿಡುಗಡೆ ಮಾಡಲಿದ್ದಾರೆ. ರಾಜೇಂದ್ರ ಚೋಳ ದಕ್ಷಿಣ ಪೂರ್ವ ಏಷ್ಯಾದಲ್ಲಿ ಸಮುದ್ರ ಪ್ರಯಾಣ ಕೈಗೊಂಡು ಒಂದು ಸಾವಿರ ವರ್ಷ ಪೂರೈಸಿರುವುದನ್ನು ಈ ವಿಶೇಷ ಕಾರ್ಯಕ್ರಮವು ಆಚರಿಸುತ್ತದೆ.

<><*<><>*><>

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ಇಂದು ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೪ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

<><*<><>*><>

ಭಾರತ ದರ್ಶನವನ್ನು ಆಧರಿಸಿದ ಶೈಕ್ಷಣಿಕ ಪರ್ಯಾಯದ ಅಗತ್ಯದ ಬಗ್ಗೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಒತ್ತಿ ಹೇಳಿದ್ದಾರೆ. ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ಶಿಕ್ಷಾ ಸಂಸ್ಕೃತಿ ಉದ್ಧಾನ ನ್ಯಾಸ್ ಆಯೋಜಿಸಿದ್ದ ರಾಷ್ಟ್ರೀಯ ಚಿಂತನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು ವಿಕಸಿತ ಭಾರತಕ್ಕೆ ಇದು ಅತ್ಯಗತ್ಯವಾಗಿದೆ ನಮ್ಮ ಶೈಕ್ಷಣಿಕ ವ್ಯವಸ್ಥೆಯು ವಸಾಹತುಶಾಹಿ ವಿಚಾರಗಳ ದೀರ್ಘಕಾಲದ ಪ್ರಭಾವದ ಆಧಾರದ ಮೇಲೆ ಅಭಿವೃದ್ಧಿಗೊಂಡಿದೆ ಎಂದು ಹೇಳಿದರು.

**<><*<><>*><>**

ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರ ಶಿಕ್ಷಣ ಸಚಿವಾಲಯ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಸುರಕ್ಷತಾ ಸಂಹಿತೆಗ ಪ್ರಕಾರ ಶಾಲೆಗಳು ಮತ್ತು ಮಕ್ಕಳಿಗೆ ಸಂಬಂಧಿಸಿದ ಸೌಲಭ್ಯಗಳ ಕಡ್ಡಾಯ ಸುರಕ್ಷತಾ ಲೆಕ್ಕಪರಿಶೋಧನೆ, ತುರ್ತು ಸಿದ್ಧತೆಯಲ್ಲಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಕೌನ್ಸೆಲಿಂಗ್ ಮತ್ತು ಪೀರ್ ನೆಟ್‌ವರ್ಕ್‌ಗಳ ಮೂಲಕ ಮಾನಸಿಕ ಬೆಂಬಲವನ್ನು ಒದಗಿಸುವುದು ಸೇರಿವೆ. ಸಚಿವಾಲಯ ತನ್ನ ಶಿಫಾರಸುಗಳಲ್ಲಿ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವಿದ್ಯಾರ್ಥಿಗಳಿಗಾಗಿ ತೆಗೆದುಕೊಳ್ಳಬೇಕಾದ ಹಲವಾರು ಕ್ರಮಗಳನ್ನು ಪ್ರಸ್ತಾಪಿಸಿದೆ. ಈ ಹಂತಗಳು ಸುರಕ್ಷತಾ ಕ್ರಮಗಳು, ಜಾಗೃತಿ ಮತ್ತು ತರಬೇತಿ, ಮಾನಸಿಕ ಸಾಮಾಜಿಕ ಯೋಗಕ್ಷೇಮ, ವರದಿ ಮಾಡುವ ಕಾರ್ಯವಿಧಾನ, ಸಾರ್ವಜನಿಕ ಜವಾಬ್ದಾರಿ. ಈ ಕ್ರಮಗಳನ್ನು ಅನು?ನಗೊಳಿಸುವಲ್ಲಿ ವಿಳಂಬವಿಲ್ಲದೆ ಕಾರ್ಯನಿರ್ವಹಿಸುವಂತೆ ಶಿಕ್ಷಣ ಇಲಾಖೆಗಳು, ಶಾಲಾ ಮಂಡಳಿಗಳು ಮತ್ತು ಸಂಯೋಜಿತ ಅಧಿಕಾರಿಗಳನ್ನು ಸಚಿವಾಲಯ ಸೂಚಿಸಿದೆ.

**<><*<><>*><>**

ದೇಶದ ಯುವಕರಲ್ಲಿ ರಾಷ್ಟ್ರದ ಕುರಿತು ಗೌರವ ಭಾವನೆ ಮತ್ತು ಜಾಗತಿಕ ಮಟ್ಟದಲ್ಲಿ ದೇಶದ ಸಾಧನೆ ಕುರಿತು ಅರಿವು ಮೂಡಿಸಲು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ - ಎನ್‌ಸಿಇಆರ್‌ಟಿ ಪ್ರಮುಖ ಹೆಜ್ಜೆ ಇಟ್ಟಿದ್ದು, ಬಾಹ್ಯಾಕಾಶದಲ್ಲಿ ಭಾರತದ - ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಮತ್ತು ಭಾರತದ ಆಪರೇ?ನ್ ಸಿಂದೂರ್ ಎಂಬ ವಿಷಯಗಳು ಒಳಗೊಂಡಿರುವ ಎರಡು ಹೊಸ ಪಠ್ಯಕ್ರಮ ಮಾದರಿಗಳನ್ನು ಪರಿಚಯಿಸಲು ಸಜ್ಜಾಗಿದೆ. ಈ ಎರಡೂ ಮೈಲಿಗಲ್ಲುಗಳು, ರಕ್ಷಣೆ, ರಾಜತಾಂತ್ರಿಕತೆ, ಬಾಹ್ಯಾಕಾಶ ಪರಿಶೋಧನೆ ಮತ್ತು ಸುಸ್ಥಿರತೆಯಾದ್ಯಂತ ದೇಶದ ವಿಕಸನಗೊಳ್ಳುತ್ತಿರುವ ಶಕ್ತಿಯ ಬಗ್ಗೆ ಶಾಲಾ ಮಕ್ಕಳಿಗೆ ತಿಳಿಸಲು ವಿನ್ಯಾಸಗೊಳಿಸಲಾದ ಮಾದರಿಗಳನ್ನು ಆಧಾರವಾಗಿರಿಸುತ್ತವೆ. ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಗಳ ಪ್ರಕಾರ, ಮಾಡ್ಯೂಲ್‌ಗಳು ಪ್ರಸ್ತುತ ಅಭಿವೃದ್ಧಿ ಹಂತದಲ್ಲಿವೆ ಮತ್ತು ೩ ರಿಂದ ೧೨ ನೇ ತರಗತಿಗಳ ಶಾಲಾ ಪಠ್ಯಕ್ರಮದಲ್ಲಿ ಸೇರಿಸಲಾಗುವುದು. ೩ ರಿಂದ ೮ ನೇ ತರಗತಿಗಳ ವಿದ್ಯಾರ್ಥಿಗಳಿಗೆ ಮತ್ತು ೯ ರಿಂದ ೧೨ ನೇ ತರಗತಿಗಳಿಗೆ ಎರಡನೆಯ ಮಾಡ್ಯೂಲ್ ಇರಲಿದ್ದು ಪ್ರತಿಯೊಂದು ಎಂಟರಿಂದ ಹತ್ತು ಪುಟಗಳನ್ನು ಹೊಂದಿರುತ್ತದೆ. ಕಾರ್ಯಾಚರಣೆಯ ನಿರ್ದಿ?ತೆಗಳನ್ನು ವರ್ಗೀಕರಿಸಲಾಗಿದ್ದರೂ, ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವಲ್ಲಿ ರಕ್ಷಣೆ, ರಾಜತಾಂತ್ರಿಕತೆ ಮತ್ತು ಅಂತರ-ಸಚಿವಾಲಯ ಸಮನ್ವಯದ ಪಾತ್ರವನ್ನು ವಿವರಿಸಲು ಮಾಡ್ಯೂಲ್ ಈ ಮಿ?ನ್ ಅನ್ನು ಅಧ್ಯಯನವಾಗಿ ಬಳಸುತ್ತದೆ. "ಭಾರತದ ಮಿಲಿಟರಿ ಶಕ್ತಿ ಮತ್ತು

ಸಾರ್ವಭೌಮತ್ವವನ್ನು ರಕ್ಷಿಸಲು ತೆಗೆದುಕೊಂಡ ನಿರ್ಣಾಯಕ ಕ್ರಮಗಳ ಬಗ್ಗೆ ಯುವ ಮನಸ್ಸುಗಳಿಗೆ ಶಿಕ್ಷಣ ನೀಡುವುದು ಇದರ ಉದ್ದೇಶವಾಗಿದೆ" ಎಂದು ಸಚಿವಾಲಯ ತಿಳಿಸಿದೆ. ರಕ್ಷಣೆಯ ಜೊತೆಗೆ, ಮಾಡ್ಯೂಲ್‌ಗಳು ಜಾಗತಿಕ ಬಾಹ್ಯಾಕಾಶ ಶಕ್ತಿಯಾಗಿ ಭಾರತದ ಹೊರಹೊಮ್ಮುವಿಕೆಯನ್ನು ಎತ್ತಿ ತೋರಿಸುತ್ತವೆ. ವಿದ್ಯಾರ್ಥಿಗಳು ಚಂದ್ರಯಾನ, ಆದಿತ್ಯ ಎಲ್-೧ ನಂತಹ ಹೆಗ್ಗುರುತು ಕಾರ್ಯಾಚರಣೆಗಳ ಬಗ್ಗೆ ಮತ್ತು ಆಕ್ಸಿಯಮ್ ಮಿ?ನ್ ೪ ರ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದ ಮೊದಲ ಭಾರತೀಯರಾದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಇತ್ತೀಚಿನ ಸಾಧನೆಯ ಬಗ್ಗೆ ಕಲಿಯುತ್ತಾರೆ. ಪಠ್ಯಕ್ರಮವು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಪ್ರಮುಖ ಉಪಕ್ರಮವಾದ ಮಿ?ನ್ ಲೈಫ್ ಅನ್ನು ಸಹ ಒಳಗೊಂಡಿರುತ್ತದೆ. ಈ ವಿಭಾಗವು ವಿದ್ಯಾರ್ಥಿಗಳಿಗೆ ಸುಸ್ಥಿರ ಜೀವನ ಪದ್ಧತಿಗಳು ಮತ್ತು ಹವಾಮಾನ ಬದಲಾವಣೆಯನ್ನು ಎದುರಿಸುವಲ್ಲಿ ಪರಿಸರ ಸಮತೋಲನದ ಮಹತ್ವವನ್ನು ಪರಿಚಯಿಸುತ್ತದೆ. ಅಧಿಕೃತವಾಗಿ ಬಿಡುಗಡೆ ದಿನಾಂಕವನ್ನು ಘೋಷಿಸಲಾಗಿಲ್ಲವಾದರೂ, ಮಾಡ್ಯೂಲ್‌ಗಳನ್ನು ಪೂರ್ಣಗೊಂಡ ನಂತರ ಶೀಘ್ರದಲ್ಲೇ ಶಾಲೆಗಳಲ್ಲಿ ಪರಿಚಯಿಸುವ ನಿರೀಕ್ಷೆಯಿದೆ.

**<><*<><>*><>**

ಜಾರ್ಜಿಯಾದ ಬಟುಮಿಯಲ್ಲಿ ನಿನ್ನೆ ಸಂಜೆ ನಡೆದ ಫಿಡೆ ಮಹಿಳಾ ವಿಶ್ವಕಪ್-೨೦೨೫ ಫೈನಲ್‌ನ ಭಾರತದ ಕೊನೆರೊ ಹಂಪಿ ಮತ್ತು ದಿವ್ಯಾ ದೇಶಮುಖ್ ನಡುವಿನ ಮೊದಲ ಸುತ್ತಿನ ಪಂದ್ಯ, ಡ್ರಾನಲ್ಲಿ ಅಂತ್ಯಗೊಂಡಿದೆ. ಇಂದು ೨ನೇ ಸುತ್ತಿನ ಪಂದ್ಯ ನಡೆಯಲಿದ್ದು, ಈ ಪಂದ್ಯವೂ ಡ್ರಾನಲ್ಲಿ ಅಂತ್ಯಗೊಂಡರೆ ನಾಳೆ ಟೈ ಬ್ರೇಕರ್ ಪಂದ್ಯ ನಡೆಯಲಿದೆ. ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವವರಿಗೆ ಮುಂದಿನ ವರ್ಷ ನಡೆಯುವ ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸ್ಪರ್ಧಿಸಲು ಅವಕಾಶ ದೊರೆಯಲಿದೆ. ಈ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗೆಲುವು ಸಾಧಿಸುವ ಆಟಗಾರ್ತಿ ವಿಶ್ವಚಾಂಪಿಯನ್‌ಶಿಪ್ ಪಟ್ಟ ಹೊಂದಿರುವ ಜು ವೆನ್ಯೂನ್ ವಿರುದ್ಧ ಸೆಣಸಲಾಟ ನಡೆಸಲು ಅವಕಾಶ ಪಡೆಯಲಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**